

# ಬೆಂಕಿ

■ ನಾ. ಡಿಸೋಜ
ಕಲೆ: ಗುರು ನಾವಳ್ಳಿ

ಅನತಿ ದೂರದಲ್ಲಿ ತ್ರಿಕೋನಾಕಾರದಲ್ಲಿ ನಿಂತ ಇಗರ್ಜಿ ಕಂಡಿತು. ಕಟ್ಟಡ ಹೊಸದು. ಮೇಲೊಂದು ಶಿಲುಬೆ, ತ್ರಿಕೋನದ ನಡುವೆ ಅನ್ನುವ ಹಾಗೆ ಒಂದು ಗೂಡು. ಅದರಲ್ಲಿ ಸಂತ ಜೋಸೇಫರದೊಂದು ವಿಗ್ರಹ. ಈತ ಇಲ್ಲಿಯ ಇಗರ್ಜಿ ಸಂತ. ಇಲ್ಲಿರುವ ಕ್ರೈಸ್ತರೆಲ್ಲ ಶ್ರಮಜೀವಿಗಳಾಗಿದ್ದರಿಂದ ಆತನನ್ನೇ ಅವರು ತಮ್ಮ ಇಗರ್ಜಿಯ ಪಾತ್ರೋನ್ ಎಂದು ನಂಬಿದ್ದರು. ಇಗರ್ಜಿ ಪಕ್ಕದಲ್ಲಿ ಒಂದು ಗಂಟೆ ಗೋಪುರ. ಈ ಹಿಂದೆ ಇದ್ದ ಪಾದರಿ ಬ್ರೆಟ್ಟೋ ಕಷ್ಟಪಟ್ಟು ಇಗರ್ಜಿಯನ್ನ ಕಟ್ಟಿಸಿದ್ದರು. ಅವರು ವಂತಿಗೆಗಾಗಿ ತಟ್ಟದ ಬಾಗಿಲು ಇರಲಿಲ್ಲ. ಹತ್ತದ ಮೆಟ್ಟಿಲು ಇರಲಿಲ್ಲ. ಇಗರ್ಜಿ ಕಟ್ಟಿ ಮುಗಿಯುವ ತನಕ ಅವರು ಒಂದು ಹೊತ್ತು ಉಪವಾಸ ಇರುತ್ತಿದ್ದರು. ಎಷ್ಟು ಸಾಧ್ಯವೋ ಅಷ್ಟನ್ನ ಉಳಿಸಿ ಅವರು ಇಗರ್ಜಿ ಕಟ್ಟಿಸಿದ್ದರು. ಸಂತ ಜೋಸೇಫರ ಮೇಲೆ ಪಾದರಿ ಬ್ರೆಟ್ಟೋ ಅವರಿಗೆ ಅಪಾರವಾದ ಭಕ್ತಿ, ಈ ಭಕ್ತಿಯೇ ಅವರಿಗೆ ನೀಡಬೇಕಾದ ಎಲ್ಲ ಸ್ಫೂರ್ತಿಯನ್ನೂ ನೀಡಿತು. ಅವರು ಸುಮಾರು ಐದಾರು ವರ್ಷ ಈ ಕೆಲಸಕ್ಕಾಗಿ ನಿಂತರು. ಅಕ್ಕಪಕ್ಕದ ಸಣ್ಣ ದೊಡ್ಡ ಊರುಗಳ ಜನ ಇಲ್ಲೊಂದು ಇಗರ್ಜಿ ತಲೆ ಎತ್ತುತ್ತಿರುವುದನ್ನ ಕಂಡು ಅಚ್ಚರಿಪಟ್ಟರು. ಇದೀಗ ಎರಡು ವರ್ಷಗಳ ಹಿಂದೆ ಸಂತ ಜೋಸೇಫರ ಇಗರ್ಜಿ ಇಲ್ಲಿ ತಲೆ ಎತ್ತಿ ನಿಂತಿತು. ಧರ್ಮ ಕ್ಷೇತ್ರದ ಬಿಷಪ್ ಗುರುಗಳೇ ಬಂದು ಈ ಇಗರ್ಜಿಯನ್ನ ಮಂತ್ರಿಸಿದರು. ಹತ್ತು ಊರಿನ ಜನ ಈ ಸಮಾರಂಭಕ್ಕೆದ ಬಂದಿದ್ದರು. ಜನ ಪಾದರಿ ಬ್ರಿಟ್ಟೋ ಅವರ ಕಾರ್ಯವನ್ನ ಕೊಂಡಾಡಿದರು. ಇದೀಗ ಅದೇ ಇಗರ್ಜಿಗೆ ಬಂದಿದ್ದರು ಪಾದರಿ ಕ್ಲಮೆಂಟಾ.

ಕ್ಲಮೆಂಟಾ ಬಾಲ್ತಿದಾರನ ಜೊತೆ ಅತ್ತ ತಿರುಗುತ್ತಿರಲು ಇಗರ್ಜಿ ಮುಂದೆ ಆಡುತ್ತಿದ್ದ ಮಕ್ಕಳಲ್ಲಿ ಏನೋ ಗಡಿಬಿಡಿ ಕಂಡಿತು. ಯಾರೋ ಸಂಭ್ರಮಿಸಿದರು. ಯಾರಿಗೆ ಯಾರೋ ಕೂಗಿ ಹೇಳಿದರು. ಒಂದಿಬ್ಬರು ಪಾದರಿಯನ್ನ ಸ್ವಾಗತಿಸಲು ಮುಂದೆ ಬಂದದ್ದು ಆಯಿತು. ಆ ಕ್ಷಣದಲ್ಲಿ ಎಂಬಂತೆ ಇಗರ್ಜಿ ಮುಂದಿನ ಗಂಟೆ ಗೋಪುರದಲ್ಲಿ ಗಂಟೆ ತೂಗಾಡಿ ಢಣಾ ಢಣ್ ಢಣಾ ಢಣ್ಎಂದು ಸದ್ದು ಮಾಡಿ ಗೋಪುರದಲ್ಲಿ ಕುಳಿತ ಪಾರಿವಾಳಗಳು ಹಾರಿದವು.

ಬಟ್ಲರ್ ವೇಪ್ರನ್ ಕಟ್ಟಿಕೊಳ್ಳುತ್ತ ಓಡಿ ಬಂದ. ಕಾನ್ವೆಂಟಿನ ಮುಂಭಾಗದಲ್ಲಿ ಒಂದಿಬ್ಬರು ಸಿಸ್ಟರುಗಳು ಕಾಣಿಸಿಕೊಂಡರು. ಕೇರಿಯಿಂದ ಒಂದಿಬ್ಬರು ಇಗರ್ಜಿಯತ್ತ ಅವಸರದಲ್ಲಿ ಬರುವುದು ಕಂಡಿತು. ತನ್ನ ಜಾಗದಲ್ಲಿ ತೂಗಾಡುತ್ತಿದ್ದ ಕಂಚಿನ ಗಂಟೆ ಹೊಸ ಪಾದರಿ ಊರಿಗೆ ಬಂದುದನ್ನ ಎಲ್ಲರಿಗೂ ತಿಳಿಸಿ ಹೇಳಿತ್ತು.

'ಅದು ನಮ್ಮ ಮನೆ...'

ದೂರದಿಂದ ತನ್ನ ಮನೆ ತೋರಿಸಿ ಅತ್ತ ತಿರುಗಿದ ಬಾಲ್ತಿದಾರ.

'ಮತ್ತೆ ನಿಮ್ಮನ್ನ ಬಂದು ನೋಡತೇನೆ' ಎಂದ.

ಪಾದರಿ ಕ್ಲೆಮೆಂಟಾ ತಲೆಯಾಡಿಸಿದರು.

ಬಾಲ್ತಿದಾರ ಮನೆಯತ್ತ ತಿರುಗಿದ.

ಇಗರ್ಜಿ ಮುಂದಿನ ಕಬ್ಬಿಣದ ಗೇಟು ಹಲವಾರು ಬಾರಿ ಸದ್ದು ಮಾಡಿ ಮುಚ್ಚಿ ಕೊಂಡಿತು. ಊರಿನ ಮಿರೋಣ್ ಮಾಮ್ ಬಂದ. ಕೆಳ ಕೇರಿಯ, ಮೇಲಿನ ಕೇರಿಯ ಗುರ್ಕಾರರು ಬಂದು ಹೋದರು. ಕಾನ್ವೆಂಟಿನ ಹೆಡ್ ಮಿಸ್ ತನ್ನ ಸಂಗಾತಿಗಳ ಜೊತೆ ಬಂದು ಹೋದರು. ಊರಿನ ಪ್ರಮುಖ ಕ್ರೈಸ್ತರು, ಶ್ರೀಮಂತರು, ನಿವೃತ್ತ ಎ.ಸಿ, ಮಚಾದೋ, ಟ್ರಸರಿ ಅಧಿಕಾರಿ ಗೋನಸಾಲ್ವಿಸ್, ಹೀಗೆ ಪ್ರಮುಖರೆಲ್ಲ ಬಂದು ಪಾದರಿಗಳಿಗೆ ಕೈ ಮುಗಿದು ದೇವರ ಹೆಸರಿನಲ್ಲಿ ಅವರಿಂದ ಆಶೀರ್ವಾದ ಪಡೆದು ಹೋದರು.

ನಿಧಾನವಾಗಿ ಸಂಜೆಗತ್ತಲು ಕವಿದು ಪಾದರಿ ಬಂಗಲೆಯ ಮುಂದಿನ ದೀಪಗಳು ಬೆಳಗಿದವು. ತೋಟದಲ್ಲಿಯ ದೀಪಗಳು ಹೊತ್ತಿಕೊಂಡವು, ಬಟ್ಲರ್ ರಾತ್ರಿಯ ಊಟ ಮಾರನೇ ದಿನದ ಬೆಳಗಿನ ಉಪಹಾರ ಇವುಗಳ ಬಗ್ಗೆ ಕೇಳಿಕೊಂಡು ಹೋದ, ನಡುವೆ ತನ್ನ ಊರು, ಕಳೆದ ಹತ್ತು ವರ್ಷಗಳಿಂದ ತಾನು ಇಲ್ಲಿರುವುದು, ಊರ ಕ್ರೈಸ್ತರು ತಪ್ಪದೆ ಇಗರ್ಜಿಗೆ ಬರುವುದು ಎಲ್ಲ ಹೇಳಿದ. ಮಾತಿನ ನಡುವೆ ಇಗರ್ಜಿಗೆ ಹೋಗಿ ಗಂಟೆಯ ಕಂಬಕ್ಕೆ ಕಟ್ಟಿದ ಹಗ್ಗವನ್ನ ಬಿಚ್ಚಿ ಸಾಯಂಕಾಲದ ಪ್ರಾರ್ಥನಾ ಗಂಟೆಯನ್ನ ಹೊಡೆದ. ಗಂಟೆ ಹೊಡೆಯುವಾಗಲೇ ಆತ ಎದೆ, ಹಣೆ, ಭುಜಗಳಿಗೆ ಕೈ ಸೋಂಕಿಸಿ ಶಿಲುಬೆಯ ವಂದನೆ ಮಾಡಿದ. ಪಾದರಿ ಬಂಗಲೆ ಬಿಡುವ ಮುನ್ನ ಪಾದರಿ ಬಳಿ ಹೋಗಿ,

'ಊಟ ಎಷ್ಟು ಹೊತ್ತಿಗೆ ತರಲಿ ಫಾದರ್?' ಎಂದು ಕೇಳಲು ಬಟ್ಲರ್ ಮರೆಯಲಿಲ್ಲ.

'ನೀವು ಹಿಂದಿನವರಿಗೆ ಎಷ್ಟು ಹೊತ್ತಿಗೆ ಊಟ ಕೊಡತಿದ್ರಿ'

'ಒಂಬತ್ತೂವರೆ...'

'ಅಷ್ಟೇ ಹೊತ್ತಿಗೆ ನನಗೆ ಊಟ ಕೊಡಿ...ರಾತ್ರಿ ಹೊತ್ತು ಎರಡು ಚಪಾತಿ ಸಾಕು... ನನಗೆ ರಾತ್ರಿಗೆ